

ಅವರನ್ನು, ಅವರ ಶಕ್ತಿವಿಶೇಷಗಳನ್ನು ಗುರ್ತಿಸಿ ವಿಭಾಗಕ್ಕೆ ಅವರನ್ನು ಕರೆತಂದದ್ದು ಜಿಎಸ್‌ಎಸ್ ಅವರ ಗುಣಗ್ರಾಹಿತ್ವಕ್ಕೂ, ಮುನ್ನೋಟಕ್ಕೂ, ಅವರ ಸಾಮಾಜಿಕ ನ್ಯಾಯಪರವಾದ ಧೋರಣೆಗೂ ಹಿಡಿದ ಕನ್ನಡಿಯಾಗಿದೆ.

'ಭಿನ್ನವಿದ್ದೂ ಬೆರೆಯಬಹುದು' ಎನ್ನುವುದು ಜಿಎಸ್‌ಎಸ್ ಅವರದ್ದೇ ಪ್ರಖ್ಯಾತ ಹೇಳಿಕೆ. ಅವರ ವ್ಯಕ್ತಿತ್ವವನ್ನು ನೋಡಿದಾಗ, ಈ ಮಾತು ಅವರ ಬದುಕಿನ ಪ್ರಣಾಳಿಕೆಯೇ ಆಗಿತ್ತು ಎನ್ನುವುದು ಇನ್ನೂ ಸ್ಪಷ್ಟವಾಗುತ್ತದೆ. ಎಸ್. ವಿದ್ಯಾಶಂಕರ್, ಜಯದೇವ್ ರೀತಿಯ ಸಾಂಪ್ರದಾಯಿಕ ವಿದ್ವಾಂಸರು, ಕಿ.ರಂ. ನಾಗರಾಜ್ ಅವರಂತಹ ಕಾವ್ಯಜೀವಿಗಳು, ಕೆ.ವಿ. ನಾರಾಯಣ, ಡಿಆರ್‌ಎನ್, ಬಸವರಾಜ ಕಲ್ಗುಡಿ ಅವರಂತಹ ಆಧುನಿಕ ಚಿಂತಕರು, ಎಂ. ಚಿದಾನಂದ ಮೂರ್ತಿಗಳಂತಹ ಘನ ವಿದ್ವಾಂಸರು ಇಡೀ ವಿಭಾಗವನ್ನು ಎಲ್ಲ ಬಗೆಯ ವಿಚಾರಗಳಿಂದ ಸಮೃದ್ಧಗೊಳಿಸಿದರು. ತನ್ನದೇ ವಿಚಾರಧಾರೆಗೆ ಹೊಂದುವಂತಹವರನ್ನು ಆರಿಸಿಕೊಳ್ಳುವ ಅವಕಾಶವಿದ್ದಾಗಲೂ ಜಿಎಸ್‌ಎಸ್ ಎಲ್ಲ ದಿಕ್ಕುಗಳಿಂದಲೂ ಗಾಳಿ ಮತ್ತು ಬೆಳಕು ಕನ್ನಡ ವಿಭಾಗವನ್ನು ತುಂಬಲಿ ಎಂದು ಪ್ರಜ್ಞಾಪೂರ್ವಕವಾಗಿ ಯೋಚಿಸಿ ನಡೆದುಕೊಂಡದ್ದಿದೆಯಲ್ಲ, ಅದು ಅವರ ಮಾದರಿ. ಜಿಎಸ್‌ಎಸ್ ಅವರಿಗೆ ಅವರ ಗುರುಗಳಾದ ಕುವೆಂಪು ಅವರು ಮಾದರಿಯಾದರೂ, ಜಿಎಸ್‌ಎಸ್ ಅವರ ಕೆಲವು ನಿರ್ಣಯಗಳು 'ಅಪ್ಪಟ ಅವರದ್ದೇ ಮಾದರಿ' ಎನ್ನುವಂತಿವೆ. ಕುವೆಂಪು ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದಾಗ, ಕನ್ನಡ ಪ್ರಾಧ್ಯಾಪಕರ ಹುದ್ದೆಯನ್ನು ತುಂಬುವ ಸಂದರ್ಭ ಬಂದಿತು. ಕುವೆಂಪು ಅವರ ಸಾಮಾಜಿಕನ್ಯಾಯ ಪರವಾದ ನಿಲುವುಗಳು ಎಲ್ಲರಿಗೂ ತಿಳಿದದ್ದೇ ಆಗಿತ್ತು. ಡಿ.ಎಲ್. ನರಸಿಂಹಾಚಾರ್, ತೀ.ನಂ. ಶ್ರೀಕಂಠಯ್ಯ ಅವರು ಪ್ರಾಧ್ಯಾಪಕ ಹುದ್ದೆಗೆ ಅರ್ಹರಾಗಿದ್ದರು. ಆ ವೇಳೆಗೆ ಅದು ಯಾವ ಕಾರಣಕ್ಕೋ ಡಿಎಲ್‌ಎನ್ ಅವರಿಗೆ ನಾನು ಅರ್ಜಿ ಸಲ್ಲಿಸುವುದಿಲ್ಲ ಎನ್ನುವ ಇರಾದೆ ಇತ್ತು. ಕುವೆಂಪು ಅವರ ವಿಚಾರಗಳನ್ನು ಬಲ್ಲವರು 'ಈ ಇಬ್ಬರೂ ಬೇಡ, ಯಾರಾದರೂ ಮೀಸಲಾತಿಯವರು ಆದರೆ ಒಳ್ಳೆಯದಲ್ಲವೆ' ಎನ್ನುವ ಪ್ರಸ್ತಾವ ಮುಂದಿಟ್ಟರು. ಈ ವಿಷಯ ತಿಳಿದದ್ದೇ ಕುವೆಂಪು, 'ನಾನು ಸಾಮಾಜಿಕ ನ್ಯಾಯದ ಪರವಾಗಿದ್ದೇನೆ ಎನ್ನುವುದು ಸರಿ. ಆದರೆ, ಡಿಎಲ್ ಅವರಂತಹ ಪ್ರತಿಭಾವಂತರಿಗೆ ಅನ್ಯಾಯವಾಗುವುದನ್ನೂ ನಾನು ಒಪ್ಪುವುದಿಲ್ಲ' ಎಂದು ಡಿಎಲ್‌ಎನ್ ಅವರಿಗೆ ಪ್ರಾಧ್ಯಾಪಕ ಹುದ್ದೆಯನ್ನು ನೀಡುತ್ತಾರೆ. ಇಂಥ ಗುರು ಪರಂಪರೆಯಿಂದ ಬಂದವರು ಜಿಎಸ್‌ಎಸ್. ಅವರು ನಡೆದುಕೊಂಡದ್ದು ಇದಕ್ಕೆ ತದ್ವಿರುದ್ಧ ಎನ್ನುವ ಬಗೆಯಲ್ಲಿ. ಶೈಕ್ಷಣಿಕ ಅರ್ಹತೆಯಲ್ಲಿ ಸಿದ್ಧಲಿಂಗಯ್ಯ ಮತ್ತು ಡಿಆರ್‌ಎನ್ ಅವರಿಗಿಂತ ಮೇಲಿದ್ದವರನ್ನು ಕೈಬಿಟ್ಟು, ಇವರನ್ನು ಆರಿಸುವಾಗಲೂ ಅವರ ಮನಸ್ಸಿನಲ್ಲಿದ್ದುದು ಈ ಇಬ್ಬರ ಪ್ರತಿಭೆ ಮತ್ತು ಪೂರಕವಾಗಿ ಇವರಿಬ್ಬರ ಸಾಮಾಜಿಕ ಹಿನ್ನೆಲೆ. ಇದನ್ನೇ ನಾವು ಜಿಎಸ್‌ಎಸ್ ಅವರ ಅನನ್ಯ ಗುಣಗ್ರಾಹಿತ್ವ ಎಂದು ಗುರುತಿಸಬಹುದು. ಕನ್ನಡ ವಿಭಾಗದ ಅದೆಷ್ಟು ತಲೆಮಾರುಗಳ ವಿದ್ಯಾರ್ಥಿಗಳಿಗೆ ಈ ಎಲ್ಲ ಅಧ್ಯಾಪಕರ ಮೂಲಕ ಅದೆಷ್ಟು ಹೊಸ ಸಾಧ್ಯತೆಗಳು ದೊರೆತವು! ಇವರ ಕಾಲಘಟ್ಟದಲ್ಲಿ ಆಯೋಜಿಸಿದ ವಿಚಾರ ಸಂಕಿರಣಗಳನ್ನು ಕುರಿತೇ ಒಂದು ಅಧ್ಯಯನ ನಡೆಸಬಹುದು. ಮರುಮೌಲ್ಯಮಾಪನದ ಪರ್ವವೇ ಆಗ ಆರಂಭವಾಯಿತು. ಪಂಪನಿಂದ ಹಿಡಿದು ಟಿ.ಎಸ್. ಎಲಿಯೆಟ್ ತನಕ ವಿಚಾರ ಸಂಕಿರಣಗಳನ್ನು ನಡೆಸಿದರು. ಕನ್ನಡ ವಿಮರ್ಶೆಯ ನಿರ್ಣಾಯಕ ಹೊಳಹುಗಳು ಇಲ್ಲಿ ಮಂಡಿತವಾದವು.

'ಹೊಸಗನ್ನಡ ಕಾವ್ಯದ ಎರಡು ಮಾರ್ಗಗಳು' ಎನ್ನುವ ಶೀರ್ಷಿಕೆಯಲ್ಲಿ ನಡೆದ ಸಂಕಿರಣದಲ್ಲಿ ಶಂಕರ ಮೊಕಾಶಿ ಪುಣೇಕರ ಅವರು, 'ಎರಡು ಮಾರ್ಗಗಳು ಹೊಸಗನ್ನಡದಲ್ಲಿ ಇಲ್ಲವೇ ಇಲ್ಲ, ಇರುವುದು ಒಂದೇ ಮಾರ್ಗದ ಎರಡು ಧಾರೆಗಳು' ಎನ್ನುವ ಕುತೂಹಲಕರವಾದ ಪ್ರಬಂಧವನ್ನು ಮಂಡಿಸಿದರು. ಪಂಪನನ್ನು ಕುರಿತ ಸಂಕಿರಣದಲ್ಲಿ ಕೆ.ವಿ. ಸುಬ್ಬಣ್ಣನವರು, 'ಪಂಪನನ್ನು ಅಕಾರಣವಾದ ಸಿಂಹಾಸನದ ಮೇಲೆ ಕೂರಿಸಲಾಗಿದೆಯೇ?' ಎನ್ನುವ